ನಿ:72 167

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ವೈ. ಎ. ನಾರಾಯಣಸ್ವಾಮಿ, ರವರು ನಿಯಮ 72 ರಡಿಯಲ್ಲಿ ಮಂಡಿಸಿರುವ ಗಮನಸೆಳೆಯುವ ಸೂಚನೆಗೆ ಉತ್ತರ.

ಸೂಚನೆ:

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, "ಚಾಗಲಟ್ಟಿ" ಗ್ರಾಮದ ಸರ್ವೆ ಸಂಖ್ಯೆ:83ರ ಸ್ಥಳವು ಸಣ್ಣ ನೀರಾವರಿ ಇಲಾಖೆಗೆ ಸೇರಿದೆ. ಅನಧಿಕೃತವಾಗಿ ಭೂಗಳ್ಳರು ತಮ್ಮ ಬಡಾವಣೆಗೆ ಹೋಗಲು ಕೆರೆಯ ಮಧ್ಯಭಾಗದಲ್ಲಿ ರಸ್ತೆಯನ್ನು ನಿರ್ಮಿಸಿ ಕೆರೆಯ ಸ್ವರೂಪವನ್ನು ವಿರೂಪಗೊಳಿಸಿ, ಭೂ ಕಬಳಿಕೆಯನ್ನು ಮಾಡಿರುವ ಗಂಭೀರ ವಿಚಾರವನ್ನು ಮಾನ್ಯ ಸಣ್ಣ ನೀರಾವರಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

(ಸಣ್ಣ ನೀರಾವರಿ ಇಲಾಖೆಯಿಂದ ವರ್ಗಾಯಿಸಲ್ಪಟ್ಟಿರುತ್ತದೆ)

ಉತ್ತರ.

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ "ಚಾಗಲಟ್ಟಿ" ಗ್ರಾಮದ ಸರ್ವೆ ನಂಬರ್ 83ರಲ್ಲಿರುವ ಕೆರೆಯು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಸದರಿ ಕೆರೆಯ ಮದ್ಯದಲ್ಲಿ ಅನಧಿಕೃತವಾಗಿ ರಸ್ತೆ ನಿರ್ಮಾಣ ಮಾಡಿದ್ದು, ಇದನ್ನು ತೆರವುಗೊಳಿಸುವಂತೆ ಕರ್ನಾಟಕ ಕೆರೆ ಸಂರಂಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಜಿಲ್ಲಾ ಪಂಚಾಯತಿಗೆ ಸೂಚನೆ ನೀಡಲಾಗಿದೆ. ಅಲ್ಲದೇ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಪಿಟಿಷನ್ ಸಂಖ್ಯೆ:817/2008 ರಲ್ಲಿನ ಆದೇಶದಂತೆ ಕೆರೆಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಒತ್ತುವರಿಯನ್ನು ತೆರವುಗೊಳಿಸಬೇಕಾಗಿದೆ.

ಅದರಂತೆ, ಸಾಮಾಜಿಕ ಸಾಂಸ್ಥಿಕ ಜವಾಬ್ದಾರಿ (ಸಿ.ಎಸ್.ಆರ್) ಅಡಿಯಲ್ಲಿ ಪುನಶ್ಚೇತನಗೊಳಿಸಿ ಅಭಿವೃದ್ಧಿಪಡಿಸಲು ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ವತಿಯಿಂದ ಸಿ.ಎಂ.ಆರ್ ವಿಶ್ವ ವಿದ್ಯಾನಿಲಯದೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ.

ಕೆರೆಯಲ್ಲಿ ರಸ್ತೆ ನಿರ್ಮಾಣದಿಂದ ಉಂಟಾಗಿರುವ ಒತ್ತುವರಿಯನ್ನು ತೆರವುಗೊಳಿಸಲು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಅಗತ್ಯ ಪೋಲೀಸ್ ರಕ್ಷಣೆ ಪಡೆದುಕೊಂಡು ತೆರವುಗೊಳಿಸುವಂತೆ ಸೂಚನೆ ನೀಡಲಾಗಿದೆ. ಆದಷ್ಟು ಶೀಘ್ರವಾಗಿ ಕೆರೆಯ ಮದ್ಯಭಾಗದಲ್ಲಿ ನಿರ್ಮಿಸಿರುವ ರಸ್ತೆಯನ್ನು ನಿಯಮಾನುಸಾರ ತೆರವುಗೊಳಿಸಲಾಗುವುದು.

ಕೆ.ಎಸ್.ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

## ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಸಂಖ್ಯೆ:ಬೆಂಜಿಪಂ/ಯೋವಿ2/ಸಿಆರ್187/ಚಗಲಟ್ಟಿಕೆರೆ/2017-18 | ಎಸ್.ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು. ದಿನಾಂಕ:15.03.2021.

ರವರಿಗೆ,
ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು.

ಮಾನ್ಯರೇ,

ವಿಷಯ:- ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ ಚಾಗಲಟ್ಟಿ ಗ್ರಾಮದ ಸರ್ವೆ.ನಂ.83 ರ ಕೆರೆಯಲ್ಲಿ ಅನಧೀಕೃತವಾಗಿ ರಸ್ತೆಯನ್ನು ನಿರ್ಮಿಸಿರುವುದನ್ನು ತೆರವುಗೊಳಿಸುವ ಬಗ್ಗೆ.

ಉಲ್ಲೇಖ:- 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆ:ಕ.ಕೆ.ಸಂ.ಅ.ಪ್ರಾ/ಬೆಂ/ತಾಂತ್ರಿಕ/51/2018-19/883/ ದಿನಾಂಕ:25.01.2021.
2. ಈ ಕಚೇರಿಯ ಪತ್ರದ ಸಮಸಂಖ್ಯೆ ದಿನಾಂಕ:03.02.2021

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರ ಜಿಲ್ಲೆ, ಉತ್ತರ ತಾಲ್ಲೂಕು, ಜಾಲ ಹೋಬಳಿ, ಚಾಗಲಟ್ಟಿ ಗ್ರಾಮದ ಸರ್ವೆ.ನಂ.83 ರಲ್ಲಿರುವ ಕೆರೆಯಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ರಸ್ತೆ ಒತ್ತುವರಿ ತೆರವುಗೊಳಿಸಲು ಉಲ್ಲೇಖ(2)ರ ಈ ಕಚೇರಿಯ ಪತ್ರದಲ್ಲಿ ತಿಳಿಸಲಾಗಿತ್ತು. ರಾಜ್ಯ ಉಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ: WP-817/2008 ರ ಆದೇಶದನ್ವಯ ಕೆರೆಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಒತ್ತುವರಿಗಳನ್ನು ತಡೆಗಟ್ಟುವುದು ಆದ್ಯ ಕರ್ತವ್ಯವಾಗಿರುತ್ತದೆ ಹಾಗೂ ಒತ್ತುವರಿ ತೆರವುಗೊಳಿಸಿದ ಬಗ್ಗೆ ಈ ಕಛೇರಿಗೆ ವರದಿ ಸಲ್ಲಿಸಬೇಕಾಗಿರುತ್ತದೆ. ಆದರೆ ಒತ್ತುವರಿಯನ್ನು ತೆರವುಗೊಳಿಸಿದ ಬಗ್ಗೆ ಯಾವುದೇ ವರದಿ ಈ ಕಛೇರಿಗೆ ಸ್ವೀಕೃತವಾಗಿರುವುದಿಲ್ಲ. ಒತ್ತುವರಿಯನ್ನು ತೆರವುಗೊಳಿಸಿದ ವರದಿಯನ್ನು ರಾಜ್ಯ ಅಪೆಕ್ಸ್ ಸಮಿತಿಗೆ ತುರ್ತಾಗಿ ಸಲ್ಲಿಸಬೇಕಾಗಿರುವುದರಿಂದ ಈ ಕೂಡಲೇ ನಿಯಮಾನುಸಾರ ರಸ್ತೆ ಒತ್ತುವರಿಯನ್ನು ತೆರವುಗೊಳಿಸತಕ್ಕದ್ದು ಹಾಗೂ ಅನಧಿಕೃತವಾಗಿ ರಸ್ತೆ ನಿರ್ಮಾಣ ಮಾಡಿರುವುದಕ್ಕೆ ವಿವರಣೆಯನ್ನು ಸಲ್ಲಿಸಲು ಸಹ ತಿಳಿಸಲಾಗಿದೆ. ಇದನ್ನು ಅತ್ಯಂತ ಜರೂರೆಂದು ತಿಳಿಯತಕ್ಕದ್ದು.

ತಮ್ಮ ವಿಶ್ವಾಸಿ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ,
ಬೆಂಗಳೂರು.

ಪ್ರತಿಯನ್ನು:-

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಕಚೇರಿ ಪ್ರತಿ.

# ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ

## ಕರ್ನಾಟಕ ಸರ್ಕಾರ

ಸಂಖ್ಯೆ: ಕ.ಕೆ.ಸಂ.ಅ.ಪ್ರಾ/ಬೆಂ/ತಾಂತ್ರಿಕ/51/2018-19 /883

ದಿನಾಂಕ: 18.01.2021

ಇವರಿಗೆ,

ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು,
ಬೆಂಗಳೂರು ನಗರ ಜಿಲ್ಲಾ ಪಂಚಾಯತ್,
ಎಸ್.ಕರಿಯಪ್ಪ ರಸ್ತೆ, ಬನಶಂಕರಿ
ಬೆಂಗಳೂರು – 560070.

ಮಾನ್ಯರೇ,

29 JAN 2021

ವಿಷಯ: ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ ಚಾಗಲಟ್ಟಿ ಗ್ರಾಮದ ಸ.ನಂ. 83ರ ಕೆರೆಯಲ್ಲಿ ಅನಧಿಕೃತವಾಗಿ ರಸ್ತೆಯನ್ನು ನಿರ್ಮಿಸಿರುವುದನ್ನು ತೆರವುಗೊಳಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಪತ್ರ ಸಂಖ್ಯೆ: ಕಕೆಸಂಅಪ್ರಾ/ಬೆಂ/ತಾಂತ್ರಿಕ/51/2018-19, ದಿನಾಂಕ: 18.08.2018

* * * *

ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ ಚಾಗಲಟ್ಟಿ ಗ್ರಾಮದ ಸ.ನಂ.83 ರಲ್ಲಿನ ಕೆರೆಯನ್ನು ಸಾಮಾಜಿಕ ಸಾಂಸ್ಥಿಕ ಜವಾಬ್ದಾರಿ (CSR) ಅಡಿಯಲ್ಲಿ ಅಭಿವೃದ್ಧಿಗೊಳಿಸಲು ಸಿ.ಎಂ.ಆರ್ ಜ್ಞಾನಧಾರ ಟ್ರಸ್ಟ್‌ವತಿಯಿಂದ ಕೈಗೊಂಡಿದ್ದು ಕೆರೆಯ ಏರಿ ಅಭಿವೃದ್ಧಿ ಹಾಗೂ ಹೂಳೆತ್ತುವ ಕಾಮಗಾರಿಗಳು ಸಿ.ಎಂ.ಆರ್ ವಿಶ್ವ ವಿದ್ಯಾನಿಲಯವು ಪ್ರಗತಿಯಲ್ಲಿರುತ್ತದೆ.

ಸದರಿ ಕೆರೆಯ ಅಂಗಳದಲ್ಲಿ ಅನಧೀಕೃತವಾಗಿ ರಸ್ತೆ ನಿರ್ಮಿಸಿದ್ದು, ಸದರಿ ಅನಧೀಕೃತವಾಗಿ ನಿರ್ಮಿಸಿರುವ ರಸ್ತೆಯನ್ನು ತೆರವುಗೊಳಿಸಿ ವರದಿ ನೀಡಲು ಉಲ್ಲೇಖಿತ ಪತ್ರದನ್ವಯ ಕೋರಲಾಗಿದ್ದು ಇದುವರೆವಿಗೂ ಸದರಿ ರಸ್ತೆಯನ್ನು ತೆರವುಗೊಳಿಸಿರುವುದಿಲ್ಲ.

ರಾಜ್ಯ ಉಚ್ಚ ನ್ಯಾಯಾಲಯ ಆದೇಶ ಸಂ. WP-817/2008 ರನ್ವಯ ಕೆರೆಗಳಲ್ಲಿ ಅನಧೀಕೃತವಾಗಿ ನಿರ್ಮಿಸಿರುವ ಒತ್ತುವರಿಗಳನ್ನು, ರಸ್ತೆಗಳನ್ನು, ಕೆರೆಗಳನ್ನು ಹಾಗೂ ಇತರೆಗಳನ್ನು ತೆರವುಗೊಳಿಸಿ ರಾಜ್ಯ ಅಪೆಕ್ಸ್ ಸಮಿತಿಯ ಮಾಹಿತಿಗಾಗಿ ಮಂಡಿಸಲು ಸೂಚಿಸಲಾಗಿರುತ್ತದೆ.

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (CSR) ಅಡಿಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ದಿನಾಂಕ: 13.01.2021 ರಂದು ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ರವರು ಪರಿವೀಕ್ಷಿಸಿದ್ದು ಕೆರೆಯಲ್ಲಿ ಅನಧೀಕೃತವಾಗಿ ನಿರ್ಮಿಸಿರುವ ರಸ್ತೆಯನ್ನು ತೆರವುಗೊಳಿಸದೇ ಇರುವುದನ್ನು ಗಮನಿಸಲಾಗಿದೆ ಹಾಗೂ ಸದರಿ ಅನಧೀಕೃತವಾಗಿ ನಿರ್ಮಿಸಿರುವ ರಸ್ತೆಗೆ ಜಿಲ್ಲಾ ಪಂಚಾಯತ್ ಇಲಾಖೆಯ ವತಿಯಿಂದ ಡಾಂಬರು ಹಾಕಿಸಲಾಗಿದೆ ಎಂದು



ಮು.ತಿ.ನೋ...

# ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ-1/2020-21
4124-25
10-3-2021.

ಕಾರ್ಯಪಾಲಕ ಅಭಿಯಂತರರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ಕಟ್ಟಡ
ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ
ಬನಶಂಕರಿ, ಬೆಂಗಳೂರು -560070.

ಇವರಿಗೆ,

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲಾ ಪಂಚಾಯತ್
ಬೆಂಗಳೂರು.

ಮಾನ್ಯರೇ,

12 MAR 2021

ವಿಷಯ:- ಬೆಂಗಳೂರು ಉತ್ತರ ತಾಲ್ಲೂಕು, ಜಾಲಾ ಹೋಬಳಿ, ಚಾಗಲಹಟ್ಟಿ ಗ್ರಾಮದ ಸರ್ವೆ ನಂ 83ರ ಕೆರೆಯಲ್ಲಿ ಅನಧಿಕೃತವಾಗಿ ರಸ್ತೆಯನ್ನು ನಿರ್ಮಿಸಿರುವುದನ್ನು ತೆರವುಗೊಳಿಸುವ ಬಗ್ಗೆ.

ಉಲ್ಲೇಖ:-
1. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ರವರ ಪತ್ರದ ಸಂಖ್ಯೆ:ಕಾಕೆಸಂ/ಅಪ್ರ/ಬೆಂ/ತಾಂತ್ರಿಕ/51/2018-19/883 ದಿ:25.01.2021.
2. ಈ ಕಛೇರಿ ಹಿಂಬರಹ ಪತ್ರದ ಸಂಖ್ಯೆ:3465/20-21 ದಿನಾಂಕ:30.01.2021.
3. ತಮ್ಮ ಕಛೇರಿ ಪತ್ರದ ಸಂಖ್ಯೆ:ಬೆಂಜಿಪಂ/ಯೋವಿ(2)/ಸಿಆರ್187/ಚಾಗಲಹಟ್ಟಿ ಕೆರೆ/17-18 ದಿ:03.02.2021.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಬೆಂಗಳೂರು ಉತ್ತರ ತಾಲ್ಲೂಕು ರವರಿಗೆ ಬರೆದ ಈ ಕಛೇರಿ ಪತ್ರದ ಸಂಖ್ಯೆ:3714-1520-21 ದಿನಾಂಕ:12.02.2021.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಬೆಂಗಳೂರು ಉತ್ತರ ತಾಲ್ಲೂಕು ರವರ ಪತ್ರದ ಸಂಖ್ಯೆ:640/20-21 ದಿ:03.03.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಉತ್ತರ ತಾಲ್ಲೂಕು, ಜಾಲಾ ಹೋಬಳಿ, ಚಾಗಲಹಟ್ಟಿ ಗ್ರಾಮದ ಸರ್ವೆ ನಂ 83ರಲ್ಲಿನ ಕೆರೆಯನ್ನು ಸಾಮಾಜಿಕ ಸಾಂಸ್ಥಿಕ ಜವಬ್ದಾರಿಯಡಿಯಲ್ಲಿ (ಸಿ.ಎಸ್.ಆರ್) ಅಭಿವೃದ್ಧಿಗೊಳಿಸಲು ಸಿ.ಎಂ.ಆರ್ ವಿಶ್ವವಿದ್ಯಾಲಯವು ಜ್ಞಾನದಾರ ಟ್ರಸ್ಟ್ ವತಿಯಿಂದ ಕೈಗೊಂಡಿದ್ದು, ಕೆರೆಯ ಏರಿ ಅಭಿವೃದ್ಧಿ ಹಾಗೂ ಹೂಳೆತ್ತುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಈ ಸಂಬಂಧವಾಗಿ ಕಾಮಗಾರಿಗಳ ಪರಿವೀಕ್ಷಣೆಗೆ ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಇಲಾಖೆ ಹಾಗೂ ಇವರು ದಿನಾಂಕ:13.01.2021ರಂದು ಪರಿವೀಕ್ಷಣೆಗೆ ಮಾಡಿದ ಸಂದರ್ಭದಲ್ಲಿ ಕೆರೆಯಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ರಸ್ತೆಯನ್ನು ತೆರವುಗೊಳಿಸದೇ ಇರುವುದನ್ನು ಗಮನಿಸಿದ್ದಾರೆ ಹಾಗೂ ಸ್ಥಳೀಯವಾಗಿ ವಿಚಾರಿಸಿದಾಗ ಜಿಲ್ಲಾ ಪಂಚಾಯತಿ ವತಿಯಿಂದ ಸದರಿ ಅನಧಿಕೃತ ರಸ್ತೆಗೆ ಡಾಂಬರು ಹಾಕಿಸಲಾಗಿದೆ ಎಂಬ ಮಾಹಿತಿ ನೀಡಲಾಗಿರುತ್ತದೆ. ಈ ರಸ್ತೆಯು ಕೆರೆಯನ್ನು ಎರಡು ಭಾಗಗಳನ್ನಾಗಿ ಮಾಡಿರುವುದರಿಂದ ಕೆರೆಯ ಮೂಲ ವಿನ್ಯಾಸ ಮತ್ತು ಕೆರೆಯ ಕ್ಷೇತ್ರವು ಕ್ಷೀಣಸುವಿಕೆಗೆ ಕಾರಣವಾಗಿರುತ್ತದೆ ಆದ್ದರಿಂದ ಕೂಡಲೇ ಅನಧಿಕೃತ ಒತ್ತುವರಿಯನ್ನು ತೆರವುಗೊಳಿಸಿ ವರದಿ ನೀಡುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ರವರು ಉಲ್ಲೇಖ(1)ರ ಪತ್ರದಲ್ಲಿ ತಿಳಿಸಿರುತ್ತಾರೆ.

ರಾಜ್ಯ ಉಚ್ಚ ನ್ಯಾಯಾಲಯದ ಆದೇಶ ಸಂ.WP-81/7/2008 ರನ್ವಯ ಕೆರೆಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಒತ್ತುವರಿಗಳನ್ನು ತೆರವುಗೊಳಿಸಿ ರಾಜ್ಯ ಅಪೆಕ್ಸ್ ಸಮಿತಿಯ ಮಾಹಿತಿಗೆ ಮಂಡಿಸಬೇಕಾಗಿರುವುದರಿಂದ ಕೂಡಲೇ ಸ್ಥಳ ಪರಿಶೀಲಿಸಿ ಅನಧಿಕೃತ ರಸ್ತೆ ಒತ್ತುವರಿ ತೆರವುಗೊಳಿಸಲು ನಿಯಮಾನುಸಾರ ಅಗತ್ಯಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ಜಿಲ್ಲಾ ಪಂಚಾಯತಿಗೆ ಕೂಡಲೇ ವರದಿ ಸಲ್ಲಿಸುವಂತೆ ಉಲ್ಲೇಖ(3)ರ ಪತ್ರದಲ್ಲಿ ಸೂಚಿಸಿರುತ್ತೀರಿ.

ಈ ಮೇಲಿನ ಹಿನ್ನೆಲೆಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಜಾಲಾ ಹೋಬಳಿ, ಚಾಗಲಹಟ್ಟಿ ಗ್ರಾಮದ ಸರ್ವೆ ನಂ 83ರಲ್ಲಿನ ಕೆರೆಯ ಸ್ಥಳವನ್ನು ಪರಿಶೀಲಿಸಿ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಉಲ್ಲೇಖ(2)ರ ಹಿಂಬರಹ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಬೆಂಗಳೂರು ಉತ್ತರ ತಾಲ್ಲೂಕು ರವರಿಗೆ ಸೂಚಿಸಲಾಗಿತ್ತು. ಆದರೆ ಮಾಹಿತಿಯು ಸ್ವೀಕೃತಿಯಾಗದ ಕಾರಣ, ಉಲ್ಲೇಖ(4)ರ ಪತ್ರದಲ್ಲಿ ವರದಿಯನ್ನು ಕೂಡಲೇ ಸಲ್ಲಿಸಲು ಪುನಃ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಬೆಂಗಳೂರು ಉತ್ತರ ತಾಲ್ಲೂಕು ರವರಿಗೆ ಸೂಚಿಸಲಾಗಿತ್ತು.

ಅದರಂತೆ ಉಲ್ಲೇಖ(5)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಬೆಂಗಳೂರು ಉತ್ತರ ತಾಲ್ಲೂಕು ರವರು ಸದರಿ ಕೆರೆಯನ್ನು ಪರಿವೀಕ್ಷಣೆ ಮಾಡಲಾಗಿದ್ದು, ಕೆರೆಯನ್ನು ಸಿ.ಎಂ.ಆರ್ ವಿಶ್ವವಿದ್ಯಾಲಯದ ಜ್ಞಾನಧಾರ ಟ್ರಸ್ಟ್ ವತಿಯಿಂದ ಏರಿಯ ಅಭಿವೃದ್ಧಿ ಮತ್ತು ಹೂಳು ತೆಗೆಯುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಹಾಗೂ ಬಿ.ಬಿ.ಎಂ.ಪಿ ವತಿಯಿಂದ ಕೆರೆಯ ಮಧ್ಯಭಾಗದಲ್ಲಿ ಡಾಂಬರು ರಸ್ತೆಯನ್ನು ನಿರ್ಮಿಸಲಾಗಿರುತ್ತದೆ, ಸದರಿ ಕೆರೆಯ ಗ್ರಾಮದ ನಕ್ಷೆಯಲ್ಲಿ ಕೆರೆಯ ಮದ್ಯಭಾಗದಲ್ಲಿ ಬಿಟ್ಟು ಎರಡು ಕಡೆ ಬಂಡಿದಾರಿಯು ಇರುತ್ತದೆ ಎಂಬುದಾಗಿ ವರದಿ ಮಾಡಿರುತ್ತಾರೆ. ಉಲ್ಲೇಖ(3)ರಲ್ಲಿ ಜಾಗಲಹಟ್ಟಿ ಗ್ರಾಮಸ್ಥರು ಅರ್ಜಿಯನ್ನು ನಿರ್ದೇಶಕರು ಕೆರೆ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಅರ್ಜಿಯನ್ನು ನೀಡಿ, ಅರ್ಜಿಯಲ್ಲಿ ಚಾಗಲಹಟ್ಟಿ ಕೆರೆಯ ಆಸುಪಾಸಿನಲ್ಲಿ ನಮ್ಮಗಳ ಜಮೀನುಗಳಿದ್ದು, ಸದರಿ ಜಮೀನುಗಳಿಗೆ ಹೆಣ್ಣೂರು-ಬಾಗಲೂರು ಮುಖ್ಯರಸ್ತೆಯಿಂದ ಶ್ರೀನಿವಾಸಪುರದ ಗ್ರಾಮದ ಗಡಿಯವರೆಗೆ ನಮ್ಮ ಪೂರ್ವಿಕರ ಕಾಲದಿಂದಲೂ ಅಂದರೆ ಸುಮಾರು 40 ರಿಂದ 50 ವರ್ಷಗಳ ಹಿಂದಿನಿಂದಲೂ ರೂಡಿದಾರಿ ಇದ್ದು, ಈ ರಸ್ತೆಯನ್ನು ನಮ್ಮ ಜಮೀನುಗಳಿಗೆ ಕೆಲಸ ಕಾರ್ಯಗಳಿಗೆ ಓಡಾಡಲು ಬಳಸಲಾಗುತ್ತಿದ್ದು, ಈ ರಸ್ತೆ ಕಚ್ಚಾ ರಸ್ತೆಯಾಗಿದ್ದು, ಜಮೀನುಗಳಿಗೆ ಓಡಾಡಲು ತುಂಬಾ ಕಷ್ಟವಾದ ಕಾರಣ ಸ್ಥಳೀಯ ಶಾಸಕರು ಹಾಗೂ ಜನ ಪ್ರತಿನಿಧಿಗಳ ಗಮನಕ್ಕೆ ತಂದು ರಸ್ತೆಯನ್ನು ಡಾಂಬರು ರಸ್ತೆ ಮಾಡಲು ಅನೇಕ ಭಾರಿ ಮನವಿ ಮಾಡಿಕೊಂಡ ಮೇರೆಗೆ, ಬಿ.ಬಿ.ಎಂ.ಪಿ ವತಿಯಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ರಸ್ತೆಯನ್ನು ಅಭಿವೃದ್ಧಿಪಡಿಸಿ ಡಾಂಬರು ರಸ್ತೆ ಮಾಡಿ ನಮ್ಮಗಳಿಗೆ ಓಡಾಡಲು ಅನುಕೂಲ ಮಾಡಿಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ.

ಈಗ ಕೆರೆ ಅಭಿವೃದ್ಧಿ ನಡೆದಲ್ಲಿ ಹಾಲಿ ಇರುವ ಡಾಂಬರು ರಸ್ತೆಯನ್ನು ತೆರವುಗೊಳಿಸಿ ಕೆರೆಯ ಏರಿಯ ಸುತ್ತಾ ರಸ್ತೆಯನ್ನು ನಿರ್ಮಿಸಲು ಯೋಜನೆ ರೂಪಿಸಿರುವುದಾಗಿ ತಿಳಿದು ಬಂದಿರುತ್ತದೆಂದು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾದಿಕಾರದಿಂದ ಹೆಣ್ಣೂರು-ಬಾಗಲೂರು ಮುಖ್ಯರಸ್ತೆಯಿಂದ ಶ್ರೀನಿವಾಸಪುರ ಗ್ರಾಮದ ಗಡಿಯವರೆಗೆ 60 ಅಡಿಗಳ ರಸ್ತೆ ಇರುವುದನ್ನು ಸಿ.ಡಿ.ಪಿಯಲ್ಲಿ ಗುರುತಿಸಿ ಸದರಿ ಪ್ರದೇಶದ ವ್ಯಾಪ್ತಿಯಲ್ಲಿ ಬಿ.ಡಿ.ಎ ನಿಯಮಾನುವಳಿಯಂತೆ ರಸ್ತೆ ಇರುವುದನ್ನು ಮನಗಂಡು ಖಾಸಗಿಯವರೆಗೆ ಶಾಲಾ ಕಟ್ಟಡ ನಿರ್ಮಾಣ ಮಾಡಲು ನಕ್ಷೆಯನ್ನು ಅನುಮೋದನೆ ಸಹ ನೀಡಲಾಗಿದ್ದು, ಹಾಗೂ 60 ಅಡಿಗಳು ಇರುವ ಡಾಂಬರು ರಸ್ತೆಯನ್ನು ತೆರವುಗೊಳಿಸಬಾರದೆಂದು ಗ್ರಾಮಸ್ಥರು ಮನವಿ ಪತ್ರದಲ್ಲಿ ಕೋರಿರುತ್ತಾರೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಬೆಂಗಳೂರು ಉತ್ತರ ತಾಲ್ಲೂಕು ರವರು ವರದಿ ಮಾಡಿ, ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ನಿರ್ದೇಶನ ನೀಡುವಂತೆ ಕೋರಿರುತ್ತಾರೆ.

ಸದರಿ ರಸ್ತೆಯನ್ನು ಬಿ.ಬಿ.ಎಂ.ಪಿ ಯವರು ಜಿಲ್ಲಾ ಪಂಚಾಯತಿ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರ ಗಮನಕ್ಕೆ ತರದೇ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ರಸ್ತೆಯನ್ನು ಅಭಿವೃದ್ಧಿಪಡಿಸಿರುತ್ತಾರೆಂದು ತಿಳಿದುಬಂದಿರುತ್ತದೆ. ಈ ಮೇಲಿನ ಎಲ್ಲಾ ಅಂಶವನ್ನು ತಮ್ಮ ಆದ್ಯ ಗಮನಕ್ಕೆ ತರುತ್ತಾ ಸೂಕ್ತ ನಿರ್ದೇಶನ ನೀಡಲು ಹಾಗೂ ಕೆರೆ ಇರುವ ಗ್ರಾಮದ ನಕ್ಷೆಯನ್ನು ಈ ಪತ್ರದೊಂದಿಗೆ ಲಗತ್ತಿಸುತ್ತಾ, ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ಅಡಕ:ಗ್ರಾಮಸ್ಥರ ಮನವಿ ಪತ್ರ, ಚಾಗಲಹಟ್ಟಿ ಗ್ರಾಮದ ನಕ್ಷೆ
ಹಾಗೂ ಆರ್.ಎಸ್.ನಕ್ಷೆ.

ತಮ್ಮ ವಿಶ್ವಾಸಿ

ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ, ಬೆಂಗಳೂರು.

# ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಸಂಖ್ಯೆ:ಬೆಂಜಿಪಂ/ಯೋವಿ 2/ಸಿಆರ್187/ಜಾಗಲಟ್ಟಿಕೆರೆ/2017-18

ಎಸ್.ಕರಿಯಪ್ಪ ರಸ್ತೆ, ಬನಶಂಕರಿ,
ಬೆಂಗಳೂರು, ದಿನಾಂಕ:17.02.2020.

ರವರಿಗೆ,

ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಕರ್ನಾಟಕ ಕೆರೆ ಸಂರಕ್ಷಣೆ ಮತ್ತು
ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಮಾನ್ಯರೆ,

ವಿಷಯ:- ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಜಾಗಲಟ್ಟಿ ಗ್ರಾಮದ ಸರ್ವೇನಂಬರ್ 83 ರಲ್ಲಿನ ಕೆರೆಯನ್ನು ಪುನಶ್ಚೇತನಗೊಳಿಸಿ ಅಭಿವೃದ್ಧಿ ಪಡಿಸುವ ಬಗ್ಗೆ.

ಉಲ್ಲೇಖ:-1. ತಮ್ಮ ಕಛೇರಿ ಪತ್ರ ಸಂಖ್ಯೆ:ಕಕೆಸಂಅಪ್ರಾ/ಬೆಂ/ತಾಂತ್ರಿಕ/ 18/2018-19/410. ದಿನಾಂಕ:17.07.2019

2. ತಮ್ಮ ಕಛೇರಿ ಪತ್ರ ಸಂಖ್ಯೆ:ಕಕೆಸಂಅಪ್ರಾ/ಬೆಂತಾಂತ್ರಿಕ/ 18/2018-19/924. ದಿನಾಂಕ:10.02.2020

3. ಡಾ.ಪ್ರವೀಣ್ ಆರ್ ಕುಲಸಚಿವರು ಸಿ.ಎಂ.ಆರ್. ವಿಶ್ವವಿದ್ಯಾನಿಲಯ ಇವರ ಪತ್ರದ ದಿನಾಂಕ:15.02.2020

*****

ಬೆಂಗಳೂರು ನಗರ ಜಿಲ್ಲೆ, ಉತ್ತರ ತಾಲ್ಲೂಕು, ಜಾಲ ಹೋಬಳಿ, ಜಾಗಲಟ್ಟಿ ಗ್ರಾಮದ ಸರ್ವೇ ನಂ.83 ರಲ್ಲಿರುವ ಕೆರೆಯನ್ನು CSR ಅಡಿಯಲ್ಲಿ ಸಿ.ಎಂ.ಆರ್ ವಿಶ್ವವಿದ್ಯಾನಿಲಯವು ಸಿ.ಎಂ.ಆರ್ ಜ್ಞಾನಧಾರ ಟ್ರಸ್ಟ್ ವತಿಯಿಂದ ರೂ. 550.00 ಲಕ್ಷಗಳ ಅಂದಾಜುಮೊತ್ತದಲ್ಲಿ ಅಭಿವೃದ್ಧಿಪಡಿಸಲು ಪ್ರಾಧಿಕಾರವು ಅನುಮೋದನೆಯನ್ನು ನೀಡಿರುತ್ತದೆ. ಎಂದು ತಿಳಿಸಿ MOU (ಕರಾರು ಒಪ್ಪಂದ) ಪತ್ರವನ್ನು ನಿರ್ವಹಿಸಿಕೊಂಡು ಹೋಗಲು ಜಿಲ್ಲಾ ಪಂಚಾಯಿತಿಗೆ ಕಳುಹಿಸಲಾಗಿದೆ

ತಮ್ಮ ಸೂಚನೆಯಂತೆ MOU (ಕರಾರು ಒಪ್ಪಂದ) ನ ಮೂಲ ಪತ್ರ ಮತ್ತು ಇತರೆ 3 ಪ್ರತಿಗಳಿಗೆ ಸಹಿ ಮಾಡಲಾಗಿದ್ದು, MOU ನ ಮೂಲ ಪತ್ರ ಮತ್ತು ಇತರೆ 3 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ. ತಾವು ಸಹಿ ಮಾಡಿದ ನಂತರ ಒಂದು ಪ್ರತಿಯನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ,
ಬೆಂಗಳೂರು.

ಪ್ರತಿಯನ್ನು:-

1. ಡಾ.ಪ್ರವೀಣ್.ಆರ್. ಕುಲಸಚಿವರು, ಸಿ.ಎಂ.ಆರ್ ವಿಶ್ವವಿದ್ಯಾಲಯ ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ಕಛೇರಿ ಪ್ರತಿ.

# ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ

ಸಂಖ್ಯೆ: ಬೆಂಜಿಪಂ/ಯೋವಿ2/ಸಿಆರ್187/ಚಗಲಟ್ಟಿಕೆರೆ/2017-18

ಎಸ್.ಕರಿಯಪ್ಪ ರಸ್ತೆ, ಬನಶಂಕರಿ,
ಬೆಂಗಳೂರು, ದಿನಾಂಕ:17.03.2021

ರವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ.ವೈ.ಎ.ನಾರಾಯಣಸ್ವಾಮಿ ರವರ ಪ್ರಶ್ನೆಗೆ ಉತ್ತರಿಸುತ್ತಿರುವ ಬಗ್ಗೆ.

ಉಲ್ಲೇಖ:-
1. ಜಿಲ್ಲಾ ಪಂಚಾಯತಿ ಪತ್ರದ ಸಮ ಸಂಖ್ಯೆ ದಿನಾಂಕ:17.02.2020.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆ:ಕ.ಕೆ.ಅ.ಪ್ರಾ/ಬೆಂ /ತಾಂತ್ರಿಕ/51/2018-19/883 ದಿನಾಂಕ:25.01.2021
3. ಜಿಲ್ಲಾ ಪಂಚಾಯತಿ ಪತ್ರದ ಸಮ ಸಂಖ್ಯೆ ದಿನಾಂಕ:15.03.2021.

******

ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಚಾಗಲಟ್ಟಿ ಗ್ರಾಮದ ಸರ್ವೆ ನಂ.83 ರಲ್ಲಿರುವ ಕೆರೆಯನ್ನು ಸಾಮಾಜಿಕ ಸಾಂಸ್ಥಿಕ ಜವಬ್ದಾರಿ(ಸಿ.ಎಸ್.ಆರ್) ಅಡಿಯಲ್ಲಿ ಪುನಶ್ಚೇತನಗೊಳಿಸಿ ಅಭಿವೃದ್ಧಿಪಡಿಸಲು ಸಿ.ಎಂ.ಆರ್. ವಿಶ್ವವಿದ್ಯಾನಿಲಯದೊಂದಿಗೆ ಉಲ್ಲೇಖ(1) ರಂತೆ ಕರಾರು ಒಪ್ಪಂದ(MOU) ಮಾಡಿಕೊಳ್ಳಲಾಗಿದೆ.

ಸದರಿ ಕೆರೆಯ ಮಧ್ಯಭಾಗದಲ್ಲಿ ಅನಧಿಕೃತವಾಗಿ ರಸ್ತೆ ನಿರ್ಮಾಣ ಮಾಡಿದ್ದು ಇದನ್ನು ತೆರವುಗೊಳಿಸುವಂತೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಜಿಲ್ಲಾ ಪಂಚಾಯತಿಗೆ ಉಲ್ಲೇಖ(2)ರಲ್ಲಿ ಸೂಚಿಸಲಾಗಿರುತ್ತದೆ. ಪ್ರಾಧಿಕಾರದ ಸೂಚನೆಯಂತೆ ಕೆರೆಯಲ್ಲಿ ನಿರ್ಮಿಸಿರುವ ಅನಧಿಕೃತ ರಸ್ತೆ ನಿರ್ಮಾಣವನ್ನು ತೆರವುಗೊಳಿಸುವಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಜಿಲ್ಲಾ ಪಂಚಾಯತಿಯಿಂದ ಉಲ್ಲೆಖ(3)ರ ಪತ್ರದಲ್ಲಿ ನಿರ್ದೇಶನ ನೀಡಲಾಗಿರುತ್ತದೆ.

ತಮ್ಮ ವಿಶ್ವಾಸಿ,

17/3/21

for ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ,
ಬೆಂಗಳೂರು.